ಸಾಕ್ಷಿಯನ್ನು ಕರೆಯಿಸಿ ಪ್ರಮಾಚ ವಚನ ಭೋದಿಸಲಾಯಿತು. ದಿಃ 22-01-2024

ಮುಖ್ಯ ವಿಚಾರಣೆಃ ಶ್ರೀ ಹೆಚ್ ಬಿ ಪಿ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಪಿರ್ಯಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣೀಕರಿಸಿದ ಶಪಥ ಪತ್ರವನ್ನು ಹಾಜರುಪಡಿಸಿದ್ದುದ್ದು ಅದನ್ನು ನನ್ನ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಕೋರುತ್ತೇನೆ. ಶಪಥ ಪತ್ರದಲ್ಲಿ ಬರೆಸಿದ ಎಲ್ಲಾ ವಿಷಯಗಳು ಸತ್ಯ ಮತ್ತು ಸರಿ ಇದ್ದು, ಅದನ್ನು ಓದಿ ತಿಳಿದುಕೊಂಡು ಸರಿ ಇರುತ್ತದೆ ಎಂದು ಸಹಿ ಮಾಡಿರುತ್ತೇನೆ. ಪಿಡಬ್ಲ್ಯೂ1 ಎಂದು ವಿಚಾರಿಸಲಾಯಿತು.

2. ಆರೋಪಿ ನೀಡಿದ ಮೂಲ ಚೆಕ್ಕನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಆರೋಪಿಯ ಸಹಿಯನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ-1(ಎ) ಎಂದು, ಬ್ಯಾಂಕಿನವರು ನೀಡಿದ ಹಿಂಬರಹ ಹಾಜರುಪಡಿಸಿದ್ದು, ಅದನ್ನು ನಿಪಿ-2 ಎಂದು, ವಕೀಲರ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-3 ಎಂದು, ಅಂಚೆ ಕಚೇರಿಯ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-4 ಎಂದು, 3 ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-5 ರಿಂದ 7 ಎಂದು, ಆರೋಪಿಗಳು ಸ್ವೀಕರಿಸದೆ ಮರಳಿ ಬಂದ 3 ಅಂಚೆ ಲಕೋಟೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-8 ರಿಂದ 10 ಎಂದು, (ಸದರಿ ಅಂಚೆ ಲಕೋಟೆಯನ್ನು ನ್ಯಾಯಾಲಯದ ಮುಂದೆ ತೆರೆದು) ಅದರಲ್ಲಿರುವ ನೋಟಿಗಳನ್ನು ನಿಪಿ-8(ಎ) ಯಿಂದ 10(ಎ) ಎಂದು, ಪಿರ್ಯಾದಿ ಹಾಗೂ ಆರೋಪಿಗಳ ನಡುವೆ ಆದ ಕರಾರನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು, ನಿಪಿ-11 ರಲ್ಲಿರುವ 1 ನೇ ಕಂಪನಿ ಆರೋಪಿಯ 28 ಸಹಿಗಳನ್ನು ಒಟ್ಟಾರೆಯಾಗಿ ನಿಪಿ-11(ಎ) ಎಂದು, Termination of franchese agreement ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ನನ್ನ

ಪಿರ್ಯಾದನ್ನು ಪರಿಗಣಿಸಿ ಆರೋಪಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಕಲಂ 145 ಎನ್.ಐ. ಆ್ಯಕ್ಟ್ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಪಾಟೀ ಸವಾಲು ಮಾಡಲು ಅವಕಾಶ ಕೊಡಬೇಕೆಂದು ಕೇಳಿದ ಕಾರಣ ಕೇಸನ್ನು ಪಾಟೀ ಸವಾಲಿಗೆ ಇರಿಸಲಾಗಿದೆ.

<u>ಪಾಟೀ ಸವಾಲುಃ</u> ಶ್ರೀ ಎ ಬಿ ಬಿ ವಕೀಲರು ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ

Accused No. 1 to 6 are absent. Ep filed and allowed for a day. Complainant present and field chief affidavit in lieu of his examination in chief and same is accepted and examined as PW.1 and got marked exhibit P.1 to 12 and 1(a), 8(a) to 10(a), 11(a).

Accused counsel filed application No. 145(2) of N.I. Act. Hence for cross of PW.1.

Call on: 13-02-2024.

Prl. Civil Judge & JMFC.
Karkala